ಉದ್ದೇಶ ಮತ್ತು ಕಾರಣಗಳ ಹೇಳಿಕೆ

1984ರ ಅವಧಿಯಲ್ಲಿದ್ದ ಬೆಂಗಳೂರು ನಗರ ಯೋಜನಾ ಪ್ರದೇಶವಲಯ ವಿನಿಯಮಗಳು, 1972 - ಇದು ನೆಲ ಅಂತಸ್ತೂ ಸೇರಿದಂತೆ ಐದು ಅಂತಸ್ತುಗಳ ನಿರ್ಮಾಣಕ್ಕೆ ಉಪಬಂಧ ಕಲ್ಪಿಸಿತ್ತು. ಕೆಲವು ಪ್ರಕರಣಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯು ಐದು ಅಂತಸ್ತುಗಳಿಗೂ ಹೆಚ್ಚಿನ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಿತ್ತು. ಕೆಲವು ಕಟ್ಟಡಗಳ ಸಂಬಂಧದಲ್ಲಿ ಆಗ ಜಾರಿಯಲ್ಲಿದ್ದ ವಲಯ ವಿನಿಯಮಗಳಿಗೆ ವಿರುದ್ಧವಾಗಿ ನಗರಪಾಲಿಕೆಯು ನೀಡಿದ ಅನುಮತಿಯನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು ಮತ್ತು ವಲಯ ವಿನಿಯಮಗಳನ್ನು ಉಲ್ಲಂಘಿಸಿ ನೀಡಲಾದ ಅನುಮತಿಯು ಕಾನೂನುಬಾಹಿರವೆಂದು ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠ ತೀರ್ಪು ನೀಡಿತ್ತು. ವಿಶೇಷ ಅನುಮತಿಯ ರಿಟ್ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಹಾಗೂ ಉಚ್ಚನ್ಯಾಯಾಲಯದ ತೀರ್ಪನ್ನು ಪರಿಣಾಮಗೊಳಿಸಬೇಕೆಂಬ ನಿರ್ದೇಶನದೊಂದಿಗೆ 19-1-1987ರಂದು ಸರ್ವೋಚ್ಚ ನ್ಯಾಯಾಲಯ ರಿಟ್ ಅರ್ಜಿಯನ್ನು ರದ್ದುಗೊಳಿಸಿತು.

ಹೆಚ್ಚಿನ ಅಂತಸ್ತುಗಳ ಹಂಚಿಕೆ ಪಡೆದವರು ಪ್ರಕರಣವನ್ನು ಉಚ್ಚ ನ್ಯಾಯಾಲಯಕ್ಕೆ ಕೊಂಡೊಯ್ದುದರಿಂದ ಅನೇಕ ರಿಟ್ ಅರ್ಜಿಗಳು ಉಚ್ಚ ನ್ಯಾಯಾಲಯಕ್ಕೆ ಬಂದವು. ಇದರಲ್ಲಿ ಕೆಲವು ರಿಟ್ ಅರ್ಜಿಗಳನ್ನು ವಜಾ ಮಾಡಲಾಯಿತು ಮತ್ತು ಉಚ್ಚ ನ್ಯಾಯಾಲಯ ಅಧಿಕ ಅಂತಸ್ತುಗಳನ್ನು ಕೆಡವಿ ಹಾಕುವ ಆಜ್ಞೆಯನ್ನು ಸ್ಥಿರೀಕರಿಸಿತು.

ಅಂಥ ಒಂದು ಕಟ್ಟಡದ ಸಂಬಂಧದಲ್ಲಿ ಅಧಿಕ ಅಂತಸ್ತುಗಳನ್ನು ಕೆಡವಿ ಹಾಕುವ ಕಾರ್ಯ ನಿರ್ವಹಿಸದಿದ್ದುದಕ್ಕಾಗಿ ನ್ಯಾಯಾಲಯ ನಿಂದನೆ ಅರ್ಜಿಯನ್ನು ಬೆಂಗಳೂರು ಮಹಾನಗರ ಪಾಲಿಕೆಯ ಕಮೀಷನರ ವಿರುದ್ಧ ಸಲ್ಲಿಸಲಾಗಿತ್ತು. ಮೊದಲ ಐದು ಅಂತಸ್ತುಗಳ ಭದ್ರತೆ ಮತ್ತು ಸುರಕ್ಷತೆಗೆ ಭಂಗ ಬಾರದಂತೆ ಅಧಿಕ ಅಂತಸ್ತುಗಳನ್ನು ಕೆಡವಿ ಹಾಕುವ ಕಾರ್ಯ ಬಹಳ ಕಷ್ಟಕರವದುದರಿಂದ ಉದ್ದೇಶಿತ ರೀತಿಯಲ್ಲಿ ಕೆಡವಿ ಹಾಕುವ ಕಾರ್ಯ ನಿರ್ವಹಿಸಬಲ್ಲ ಸೂಕ್ತ ತಂಡವನ್ನು ಹುಡುಕಲು ನಗರ ಪಾಲಿಕೆ ಸಾಕಷ್ಟು ಪ್ರಯತ್ನ ನಡೆಸುತ್ತಿದೆ. ಆದರೆ ಇದುವರೆಗೆ ಈ ಕಾರ್ಯ ನಿರ್ವಹಿಸಲು ಯಾರೂ ಮುಂದೆ ಬಂದಿಲ್ಲ. ಅಷ್ಟೆ ಅಲ್ಲದೆ, ಕೆಡವಿ ಹಾಕುವ ಕಾರ್ಯದ ವೆಚ್ಚ ಒಂದು ಕಟ್ಟಡಕ್ಕೆ ಸಂಬಂಧಿಸಿದಂತೆ ಒಂದು ಕೋಟಿ ರೂ.ಗಳಿಗೂ ಹೆಚ್ಚಾಗಬಹುದಾದ್ದರಿಂದ ವೆಚ್ಚ ಭರಿಸಲಾಗದಷ್ಟು ಅಧಿಕವಾದುದಾಗಿದೆ.

ಹೀಗೆ ಕಟ್ಟಡಗಳನ್ನು ಕೆಡವಿ ಹಾಕುವ ಕಾರ್ಯ ಅತ್ಯಂತ ಕಷ್ಟಕರವಾದುದು. ಆದರೆ ನಿರ್ದೇಶನವನ್ನು ಪಾಲಿಸದಿದ್ದರೆ ನ್ಯಾಯಾಲಯ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಅಲ್ಲದೆ ಫ್ಲಾಟುಗಳನ್ನು ಪಡೆದ ಅಧಿಕ ಸಂಖ್ಯೆಯ ವ್ಯಕ್ತಿಗಳ ಹಿತಾಸಕ್ತಿಯೂ ಅಪಾಯದಲ್ಲಿದೆ ಎಂಬುದನ್ನು ಗಮನಿಸಬೇಕಾಗಿದೆ.

ಈ ಸಂದರ್ಭದಲ್ಲಿ, ಬೆಂಗಳೂರು ನಗರ ಯೋಜನಾ ಪ್ರದೇಶದ ಕರಡು ಅಭಿವೃದ್ಧಿ ಯೋಜನೆಗೆ ಅನುಬಂಧಿಸಲಾದ 1972-1984ರಲ್ಲಿ ಜಾರಿಯಲ್ಲಿದ್ದ ವಲಯ ವಿನಿಯಮಗಳನ್ನು ಪೂರ್ವಾನ್ವಯವಾಗಿ ತಿದ್ದುಪಡಿ ಮಾಡುವುದು ಮತ್ತು ಮೇಲಿನ ಉದ್ದೇಶಕ್ಕಾಗಿ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯವು ಕಾನೂನುಬಾಹಿರವೆಂದು. ಘೋಷಿಸಿರುವಂಥ ಬೆಂಗಳೂರು ಮಹಾನಗರದ ಪಾಲಿಕೆಯು ನೀಡಿದ್ದ ಅನುಮತಿಯನ್ನು ಮಾನ್ಯಗೊಳಿಸುವುದು ಅವಶ್ಯವೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಉದ್ದೇಶಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

(B) 025206

ಹೆಚ್.ಡಿ. ದೇವೇಗೌಡ,
ಮುಖ್ಯಮಂತ್ರಿ.

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

L. A. Vol. 1
No. of Copies 350

KARNATAKA LEGISLATURE SECRETARIAT

Published under Rule 356 of the Rules of Procedure and Conduct of Business in the Legislative Assembly.

AND

Printed by the Director, Printing, Stationery and Publications Govt. Press, Bangalore-560 001